


ಎಡದಿಂದ ಬಲಕ್ಕೆ

| | | |
|---|---|---|
| 1. | ಆತನಿಗಿರುವ ನಿಷ್ಠೆ ಶಾಶ್ವತವಾದದ್ದಲ್ಲ, ಬಿಡಿ | 3 |
| 3. | ಈ ಪರಿಯ ಆಲಾಪನೆಯನ್ನು ಯಾರೂ ಮೆಚ್ಚಲಿಲ್ಲವೆಂದು ರೋದನ | 3 |
| 4. | ಜೀವಿಸುತ್ತಿದ್ದವರೆಗೂ ಆತ ಎಂಥ ಜ್ಞಾನಾಸಕ್ತನೇ ಆಗಿದ್ದ ಗೊತ್ತೇ? | 3 |
| 6. | ತತ್ವಗಳನ್ನೆಲ್ಲ ತೊರೆದವನಿಗೂ ಆತನ ತಾತನಿಗೂ ವ್ಯತ್ಯಾಸ ಎಷ್ಟು? | 4 |
| 7. | ಮಾಡಿದ್ದ ಚಪಾತಿಗಳನ್ನೆಲ್ಲ ಅರ್ಪಿಸಿದ್ದು ಪರ್ವತದ ಒಡೆಯನಿಗೇ ತಾನೇ? | 4 |
| 9. | ಕಲ್ಪನೆಯ ತೇರನ್ನೆಳೆದವರು ಕಂಡಿದ್ದು 'ಕೇಳಿದ್ದನ್ನೆಲ್ಲ ಕೊಡುವ ವೃಕ್ಷ' | 4 |
| 11. | ಅಲ್ಲಿಗೆ ಬಂದು ಸೇರುವವರ ಸಂಖ್ಯೆ ಹಲವಾರು ಸಾವಿರ | 4 |
| 15. | ಕೌಶಲ್ಯಗಳೆಲ್ಲ ಕರಗತವಾದದ್ದಕ್ಕೆ ಇಂಥ ಸಂತೋಷ | 3 |
| 16. | ನಮ್ಮ ಬಗ್ಗೆ ಗಾಢ ಸ್ನೇಹ ಇದೆ ಎಂಬ ವಿಶ್ವಾಸ | 3 |
| 17. | ಈ ಮದುವಣಿಗ ಏಕೋ ತುಂಬ ಮೆತ್ತಗಿನ ಮನುಷ್ಯ | 3 |

ಮೇಲಿನಿಂದ ಕೆಳಕ್ಕೆ

| | | |
|---|---|---|
| 1. | ಅಪ್ಪನಿಗೆಂದು ಅಕ್ಕ ತಂದಿದ್ದು ಯಾವುದೂ ಹಣ್ಣಾಗಿಲ್ಲ | 3 |
| 2. | ತೇಜಸ್ಸನ್ನು ಹೆಚ್ಚಿಸುತ್ತದೆಂಬ ಆಸೆಯನ್ನು ಬಿಟ್ಟುಬಿಡು | 3 |
| 3. | ಪ್ರತಿಯೊಂದು ಭ್ರಾಂತಿಯೂ ದೂರವಾಗಲು ಮುಂಜಾನೆ ಬರಬೇಕು | 3 |
| 5. | ಸಂಶಯವೇ ಇಲ್ಲ, ಆತ ತುಂಬ ಒಳ್ಳೆಯ ನಡೆವಳಿಕೆಯವ | 3 |
| 6. | ವ್ಯತ್ಯಾಸ ಕಂಡುಹಿಡಿಯಲು ಇಂಥ ಆತುರವೇ? | 3 |
| 8. | ಮೆತ್ತಗಿರುವವರನ್ನು ತುಳಿಯಲು ಹೋಗುವಂತಹ ಸೊಕ್ಕು | 3 |
| 10. | ಕದ ತೆಗೆಯದಿದ್ದರೆ ಬಡಿದು ಹಾಕು | 3 |
| 12. | ಹೇಳುವುದು ಹೇಗೆ ? ಅದೊಂದು ಮರದ ಹಾಳೆ | 3 |
| 13. | ಓಲೈಕೆ ಮಾಡುವವರ ಮೇಲೆ ಭಾರೀ ಪ್ರೀತಿ | 3 |
| 14. | ಅಂಗಾಂಗಗಳೇನನ್ನೂ ಪಡೆದಿಲ್ಲವೇ ಮನ್ಮಥ? | 3 |

---

## 08–09–2022 ಉತ್ತರಗಳು

ಎಡದಿಂದ ಬಲಕ್ಕೆ

1. ಪರಿಭವ 3. ದಬರಿ 4. ರಜಕ 6. ಜನಪ್ರಿಯ 7. ಲೆಕ್ಕಣಿಕೆ 9. ಲಗುಬಗೆ 12. ದುಡ್ಡುಕಾಸು 14. ತುಳಿತ 15. ಚಾದರ 16. ನಗೆಗಾರ

ಮೇಲಿನಿಂದ ಕೆಳಕ್ಕೆ

1. ಪರಿಣಯ 2. ವರಮಾಲೆ 3. ದಮನ 5. ಕರಿಣಿ (ಕರಿ=ಆನೆ; ಕರಿಣಿ=ಹೆಣ್ಣಾನೆ) 6. ಜಯಶೀಲ 8. ಕೆರಳಿಸು 10. ಗುರುತು 11. ಗೆಳೆತನ 12. ದುರಾಚಾರ 13. ಕಾತರ

ಪ್ರಶ್ನಾಂಕಣ

# ಜೊಂಬೀ ಎಂದರೇನು?

ಸ್ವಇಚ್ಛೆ ಕಿಂಚಿತ್ತೂ ಇಲ್ಲದೆ, ಪರೋಪಕಾರಕ್ಕಾಗಿ 'ಜೀವಂತ ಶವ'ಗಳಾಗುವ ದುರ್ಭಾಗ್ಯದ ಜೀವಿಗಳೇ ಜೊಂಬೀಗಳು (Zombie). ಪರಾವಲಂಬನೆಯ ಈ ವಿಶಿಷ್ಟ ವಿಚಿತ್ರ ಕ್ರಮ ಪ್ರಕೃತಿಯಲ್ಲಿನ ಒಂದು ಕ್ರೂರ, ಭಯಂಕರ ವಿದ್ಯಮಾನ.

ನಿಸರ್ಗದಲ್ಲಿ ಕೆಲ ಜೀವಿಗಳು ತಮ್ಮ ಸಂತಾನದ ಅಭಿವೃದ್ಧಿಗಾಗಿ ಇತರ ಕೆಲ ನಿರ್ದಿಷ್ಟ ಜೀವಿಗಳನ್ನು ಬಲಿ ಪಡೆಯುತ್ತವೆ; ಅಂತಹ ನಿರ್ದಿಷ್ಟ ಬಲಿ ಜೀವಿಗಳನ್ನು ಹುಡುಕಿ ಅವುಗಳ ಶರೀರದಲ್ಲಿ ಮೊಟ್ಟೆಗಳನ್ನಿಡುತ್ತವೆ. ವಿಸ್ಮಯ ಏನೆಂದರೆ ಹಾಗೆ ಅಸಹಾಯಕವಾಗಿ ಬಲಿಯಾಗುವ ಜೀವಿ ಬಲಿ ಪಡೆದ ಜೀವಿಯ ಸಂತಾನ ತನ್ನೊಳಗೆ ಯಶಸ್ವಿಯಾಗಿ ವರ್ಧಿಸಲು ಅನುಕೂಲವಾಗುವಂತೆ ತನ್ನ ಸಹಜ ನಡೆವಳಿಕೆಗಳನ್ನೇ ಮಾರ್ಪಡಿಸಿಕೊಳ್ಳುತ್ತದೆ. ಮೊಟ್ಟೆಗಳಿಗೆ ಅಥವಾ ಬೀಜ ಕಣ (Spores) ಗಳಿಗೆ ವಿಹಿತವಾಗುವಂತೆ ಜೊಂಬೀಗಳಾಗಿ ಉಳಿದು ಹೊರಬರುವ ಮರಿಗಳಿಗೆ ಜೀವಂತ ಆಹಾರವಾಗುತ್ತದೆ! ವಿಶೇಷ ಏನೆಂದರೆ, ಈ ವಿದ್ಯಮಾನ ಕೀಟಗಳ ಮತ್ತು ಶಿಲೀಂಧ್ರಗಳ (Fungai) ವರ್ಗಗಳಲ್ಲೇ ಅತಿ ಹೆಚ್ಚು. ಅಂತಹ ಎರಡು ನಿದರ್ಶನಗಳು ಇಲ್ಲಿವೆ:

- ಕುಂಬಾರ ಕಣಜ (Potter Wasp) ದಂಥ ಕೆಲವಾರು ಕಣಜ ಪ್ರಭೇದಗಳು ಮೊಟ್ಟೆ ಇಡುವ ಕಾಲ ಬಂದಾಗ ಪತಂಗ ಪಾತರಗಿತ್ತಿಗಳಂತಹ ಕೀಟಗಳ ಮರಿ ಹುಳುಗಳನ್ನು (Caterpillar) ಹುಡುಕುತ್ತವೆ. ಮರಿಹುಳುವನ್ನು ಹಿಡಿದು ತಂದು (ಚಿತ್ರ1) ತಮ್ಮ ಗೂಡಿನೊಳಕ್ಕೆ ತುರುಕಿ, ಅದರ ಶರೀರದಲ್ಲೊಂದು ಮೊಟ್ಟೆಯನ್ನಿಟ್ಟು, ಅದಕ್ಕೊಂದು ವಿಷ ಚುಚ್ಚಿ, ಗೂಡನ್ನು ಮುಚ್ಚಿ ತಮ್ಮ ದಾರಿ ಹಿಡಿಯುತ್ತವೆ. ಕೆಲ ದಿನಗಳಲ್ಲೇ ಮೊಟ್ಟೆಯಿಂದ ಬರುವ ಮರಿ ಅಲ್ಲೇ ಜೊಂಬೀಯಾಗಿ ಕಾದಿದ್ದ ಮರಿಹುಳುವಿನ ಜೀವಂತ ಶರೀರವನ್ನೇ ತಿಂದು ಬೆಳೆದು ಗೂಡಿನಿಂದ ಹೊರಬರುತ್ತದೆ!




- ಶಿಲೀಂಧ್ರಗಳ ಕೆಲವು ಪ್ರಭೇದಗಳ ಬೀಜ ಕಣಗಳು ಗಾಳಿಯಲ್ಲಿ ತೇಲುತ್ತ ಬಂದು ನೆಲವಾಸಿ ಕಟ್ಟಿರುವೆಗಳ ಶರೀರದ ಮೇಲೆ ಇಳಿಯುತ್ತವೆ. ಕ್ಷಿಪ್ರವಾಗಿ ಇರುವೆಯ ಮೈಯನ್ನು ಭೇದಿಸಿ ಅದರ ಮೆದುಳನ್ನು ಪ್ರವೇಶಿಸುತ್ತವೆ. ಹಾಗಾದೊಡನೆ ಅಂಥ ಇರುವೆಯ ಸಹಜ ನಡೆವಳಿಕೆಯೇ ಬದಲಾಗುತ್ತದೆ. ಅದು ತನ್ನ ಕುಟುಂಬವನ್ನು ತೊರೆದು, ನೆಲವಾಸವನ್ನು ತ್ಯಜಿಸಿ, ಯಾವುದೋ ಮೋಡಿಗೊಳಗಾದಂತೆ ವೃಕ್ಷವೊಂದನ್ನು ಹತ್ತಿ ಎತ್ತರದಲ್ಲಿ ಎಲೆಯೊಂದನ್ನು ಕಚ್ಚಿ ಹಿಡಿದು ನಿಶ್ಚಲವಾಗಿ, 'ಜೊಂಬೀ'ಯಾಗಿ ಕೂರುತ್ತದೆ! ಆಗ ಅದರ ಶರೀರದೊಳಕ್ಕೆ ಸೇರಿದ್ದ ಬೀಜಕಣ ತನ್ನ ಆಶ್ರಯದಾತ ಇರುವೆಯನ್ನು ಜೀವಂತವಾಗಿರುವಂತೆಯೇ ತಿಂದು ಅದರ ದೇಹದಿಂದ ಹೊರಕ್ಕೆ ಕೊಂಬೆ ರೆಂಬೆಗಳಂತೆ ಬೆಳೆದು ನಿಲ್ಲುತ್ತದೆ (ಚಿತ್ರ 2, 3). ಪ್ರೌಢವಾಗಿ ಸಾವಿರಾರು ಬೀಜಕಣಗಳನ್ನು ತೇಲಿಬಿಡುತ್ತದೆ. ಅವು ನೆಲದ ಮೇಲಿನ ಇರುವೆಗಳ ಮೇಲಿಳಿಯುತ್ತವೆ. ಅದೇ ಚಕ್ರ ಮುನ್ನಡೆಯುತ್ತದೆ! ಎಂಥ ಸೋಜಿಗ! ಎಷ್ಟು ವಿಚಿತ್ರ! ಅಲ್ಲವೇ?

■ ಎನ್. ವಾಸುದೇವ್